ಎಂ ಸಿ ನಂ.8/2025
ಪಿ.ಡಬ್ಲ್ಯೂ-1 ಶಿವಶರಣ ತಂದೆ ಬಾಬುರಾಯ ಖೇಡಗಿ

**(ಇಂದು ದಿನಾಂಕಃ 27-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ನಾವು ೩ ಜನ ಸಹೋದರರು ಇರುತ್ತೇವೆ. ನನಗೆ ಅಕ್ಕ-ತಂಗಿಯರು ಇರುವುದಿಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಗೋಳಸರ ಗ್ರಾಮದಲ್ಲಿ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಸ್ವಲ್ಪ-ಸ್ವಲ್ಪ ಬರುತ್ತದೆ. ನಾನು ೩ನೇ ತರಗತಿಯವರೆಗೆ ಓದಿರುತ್ತೇನೆ. ೨೦೧೨ ರಲ್ಲಿ ನಮ್ಮ ಮದುವೆ ಪುಂಡಲಿಂಗೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ. ನನಗೆ ೩ ಜನ ಮಕ್ಕಳಿರುತ್ತಾರೆ. ನನ್ನ ಮಕ್ಕಳು ಈಗ ನನ್ನ ಹೆಂಡತಿಯ ಹತ್ತಿರವೆ ಇರುತ್ತಾರೆ. ಮದುವೆಯಾದ ಮೇಲೆ ನಾನು ಮತ್ತು ನನ್ನ ಅಣ್ಣ-ತಮ್ಮಂದಿರು ಕೂಡಿಯೆ ಇದ್ದೇವು.

೨. ನನ್ನ ಹೆಂಡತಿ ಚೆನ್ನಮ್ಮರವರು ಜೀವನಾಂಶಕ್ಕಾಗಿ ನ್ಯಾಯಾಲಯದಲ್ಲಿ ಕೇಸು ಹಾಕಿರುತ್ತಾರೆ ಎಂದರೆ ಸರಿ. ತಿಂಗಳಿಗೆ ಐದು ಸಾವಿರ ರೂಪಾಯಿ ಜೀವನಾಂಶವನ್ನು ನಾನು ನನ್ನ ಹೆಂಡತಿ ಮಕ್ಕಳಿಗೆ ಕೊಡಬೇಕು ಎಂದು ಆದೇಶವಾಗಿದೆ ಎಂದರೆ ಸರಿ. ನಾನು ಸದರಿ ಆದೇಶದಂತೆ ಹತ್ತು ಸಾವಿರ ರೂಪಾಯಿ ಜೀವನಾಂಶ ಕಟ್ಟಿರುತ್ತೇನೆ. ನನ್ನ ಹೆಂಡತಿ ಜೀವನಾಂಶಕ್ಕೆ ಕೇಸು ಹಾಕಿದ ನಂತರ ನಾನು ವಿಚ್ಛೇದನಕ್ಕಾಗಿ ಈ ಕೇಸನ್ನು ಹಾಕಿರುತ್ತೇನೆ ಎಂದರೆ ಸರಿ. ಲಾಳಸಂಗಿಯಲ್ಲಿ ಸರ್ವೆ ನಂಬರ ೨೦/೧ ರ ೬ ಎಕರೆ ಜಮೀನು ನಮ್ಮ ಹಿರಿಯರದು ಇತ್ತು ಎಂದರೆ ಸರಿ. ಸದರಿ ಜಮೀನು ನಮ್ಮ ತಂದೆಯ ಹೆಸರಿನಲ್ಲಿ ಆಗಿತ್ತು ಎಂದರೆ ಸರಿ. ಸಾಕ್ಷಿಯು ನನ್ನ ಮದುವೆಯ ಮೊದಲೆ ಅದನ್ನು ಮಾರಾಟ ಮಾಡಿರುತ್ತಾರೆ

ಎನ್ನುತ್ತಾರೆ. ದಿನಾಂಕ 26-03-2012 ರಂದು ನಮ್ಮ ತಂದೆ ಸದರಿ ಜಮೀನನ್ನು ಮಾರಿರುತ್ತಾರೆ ಎಂದರೆ ಸರಿ. ಸದರಿ ಜಮೀನು ಮಾರಾಟ ಮಾಡಿ, ನಮ್ಮ ತಂದೆ ದಿನಾಂಕ 07-12-2012 ರಂದು ಸರ್ವೆ ನಂಬರ ೧೮೯/೨ ರ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ನನ್ನ ಮಕ್ಕಳಿಗೆ ಪಾಲು ಕೊಡಬೇಕಾಗುತ್ತದೆ ಎಂದು ನಮ್ಮ ತಂದೆ ಸದರಿ ಜಮೀನನ್ನು ಈಗ ನನ್ನ ಅಣ್ಣನ ಹೆಂಡತಿಗೆ ಖರೀದಿ ಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ.

೩. ನಮ್ಮ ತಂದೆಯ ಹೆಸರಿನಲ್ಲಿ ಗೋಳಸಾರ ಗ್ರಾಮದಲ್ಲಿ ಮನೆ ಕೂಡಾ ಇದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಇಬ್ಬರು ದುಡಿದು, ೨ ಪ್ಲಾಟಗಳನ್ನು ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ಲಾಟಗಳು ಎನ್ ಎ ಆಗದ ಕಾರಣ ಖರೀದಿ ಪತ್ರ ಮಾತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

೪. ನಾನು ಕುಡಿದು ಬಂದು ನನ್ನ ಹೆಂಡತಿಗೆ ಹೊಡೆ-ಬಡೆ ಮಾಡಿ, ನನ್ನ ಹೆಂಡತಿ ಮಕ್ಕಳನ್ನು ಹೊರ ಹಾಕುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಅತ್ತೆ-ಮಾವ ಹಾಗೂ ಊರಿನ ಜನರು ಸಾಕಷ್ಟು ಬಾರಿ ನನಗೆ ಆ ಕುರಿತು ಬುದ್ದಿ ಹೇಳಿದ್ದರು ಎಂದರೆ ಸರಿಯಲ್ಲ. ಮದುವೆಯ ಸಮಯದಲ್ಲಿ ನನ್ನ ಹೆಂಡತಿ ಕಡೆಯವರು ಮೂರು ಲಕ್ಷ ರೂಪಾಯಿ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮದುವೆಯಾದ ಮೇಲೆ ನನ್ನ ಹೆಂಡತಿ ನನ್ನ ಜೊತೆ ಚೆನ್ನಾಗಿಯೆ ಇದ್ದರು ಎಂದರೆ ಸಾಕ್ಷಿಯು ೮ ವರ್ಷಗಳವರೆಗೆ ಚೆನ್ನಾಗಿ ಇದ್ದರು, ನಂತರ ನನ್ನ ತಂದೆ-ತಾಯಿಯರನ್ನು ಕೆಟ್ಟದಾಗಿ ಬೈದಿರುತ್ತಾರೆ ಎನ್ನುತ್ತಾರೆ. ನನ್ನ ಹೆಂಡತಿ ನನ್ನ ಜೊತೆ ವಾಸವಿದ್ದಾಗಲೆ ನಾನು ನನ್ನ ಹೆಂಡತಿಯ ಮನೆಗೆ ಸಂಸಾರ ಮಾಡಲು ಬರುವಂತೆ ಹೇಳಿ, ವಕೀಲರಿಂದ ನೋಟಿಸು ನೀಡಿದ್ದೆ ಎಂದರೆ ಸರಿಯಲ್ಲ.

೫. ನಾನು ನನ್ನ ಹೆಂಡತಿಯ ವಿರುದ್ದ ಬಂದು ಸಂಸಾರ ಮಾಡುವಂತೆ ಕೇಳಿ ಇಂಡಿ ನ್ಯಾಯಾಲಯದಲ್ಲಿ ಎಂ ಸಿ ನಂಬರ 12/2022 ಎಂಬ ಕೇಸು ಹಾಕಿದ್ದೆ ಎಂದರೆ ಸರಿ. ನನ್ನ ಹೆಂಡತಿ ನನ್ನ ಮನೆಯಲ್ಲಿಯೆ ಇದ್ದ ಕಾರಣದಿಂದ ಸದರಿ ಕೇಸು ವಜಾಗೊಂಡಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ನ್ಯಾಯಾಲಯದಲ್ಲಿ ನಮ್ಮಿಬ್ಬರನ್ನು ಕೂಡಿ ಇರುವಂತೆ ಹೇಳಿದ ಮೇರೆಗೆ ಒಪ್ಪಿ ನಾವು ಕೂಡಿ ಹೋಗಿದ್ದೇವು ಎನ್ನುತ್ತಾರೆ. ಆ ರೀತಿ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.